ಸೃಜನಿ
SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 94-103
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

# ಬಸವಣ್ಣನವರ ವಚನಗಳಲ್ಲಿ ನೈತಿಕ ಪ್ರಜ್ಞೆ

**ಡಾ. ಚನ್ನಮ್ಮ ಸಿದ್ರಾಮಪ್ಪ ಸಿ/ಓ ನಾಗೇಶ ಅಲ್ಬಾ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ

**Abstract:**
*ಬಸವಣ್ಣನವರು ಕನ್ನಡ ಭಕ್ತಿಸಾಹಿತ್ಯದ ಪ್ರಮುಖ ವಚನಕಾರರಾಗಿದ್ದು, ಅವರ ವಚನಗಳು ನೈತಿಕ ಮೌಲ್ಯಗಳು, ಸಮಾನತೆ, ಮತ್ತು ಮಾನವೀಯತೆ ಕುರಿತು ಆಳವಾದ ಚಿಂತನೆಗಳನ್ನು ಪ್ರತಿಪಾದಿಸುತ್ತವೆ. ಈ ಸಂಶೋಧನಾ ಲೇಖನವು ಬಸವಣ್ಣನವರ ವಚನಗಳಲ್ಲಿ ಅಡಕವಾಗಿರುವ ನೈತಿಕ ಪ್ರಜ್ಞೆಯನ್ನು ವಿಶ್ಲೇಷಿಸುವುದನ್ನು ಉದ್ದೇಶಿಸಿದೆ. ವಿಶೇಷವಾಗಿ ಸತ್ಯನಿಷ್ಠೆ, ಕಾಯಕದ ಮಹತ್ವ, ದಾಸೋಹ ಭಾವನೆ, ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗಳನ್ನು ಅಧ್ಯಯನದ ಕೇಂದ್ರಬಿಂದುಗಳಾಗಿ ಪರಿಗಣಿಸಲಾಗಿದೆ. ಗುಣಾತ್ಮಕ ವಿಶ್ಲೇಷಣಾ ವಿಧಾನವನ್ನು ಅನುಸರಿಸಿ ಆಯ್ದ ವಚನಗಳನ್ನು ವಿಷಯಾನುಸಾರವಾಗಿ ವಿಶ್ಲೇಷಿಸಲಾಗಿದೆ. ಅಧ್ಯಯನದಿಂದ ತಿಳಿದುಬರುವಂತೆ ಬಸವಣ್ಣನವರ ನೈತಿಕ ಚಿಂತನೆಗಳು ಕೇವಲ ಆಧ್ಯಾತ್ಮಿಕತೆಯಲ್ಲ, ಸಮಾಜ ಪರಿವರ್ತನೆಯತ್ತ ದಾರಿ ತೋರಿಸುವುದಾಗಿ ಕಂಡುಬರುತ್ತವೆ. ಜಾತಿ ವೈಷಮ್ಯ, ಅಸಮಾನತೆ ಮತ್ತು ಅಂಧಶ್ರದ್ಧೆಗಳ ವಿರುದ್ಧ ಅವರ ವಚನಗಳು ತೀವ್ರವಾದ ನೈತಿಕ ಪ್ರತಿರೋಧವನ್ನು ವ್ಯಕ್ತಪಡಿಸುತ್ತವೆ. ಇಂದಿನ ಸಮಾಜದಲ್ಲಿಯೂ ಬಸವಣ್ಣನವರ ನೈತಿಕ ಪ್ರಜ್ಞೆ ಪ್ರಸ್ತುತತೆಯನ್ನು ಹೊಂದಿದ್ದು, ಸಮಾನತೆ ಮತ್ತು ನೈತಿಕ ಜೀವನಕ್ಕಾಗಿ ಮಾರ್ಗದರ್ಶನ ನೀಡುತ್ತದೆ. ಆದ್ದರಿಂದ, ಈ ಅಧ್ಯಯನವು ಬಸವಣ್ಣನವರ ವಚನಗಳನ್ನು ನೈತಿಕ ಮತ್ತು ಸಾಮಾಜಿಕ ದೃಷ್ಟಿಕೋನದಿಂದ ಪುನರ್‌ಪರಿಶೀಲಿಸಲು ಸಹಕಾರಿಯಾಗಿದೆ.*

**Keywords:** *ಬಸವಣ್ಣ, ವಚನ ಸಾಹಿತ್ಯ, ನೈತಿಕ ಪ್ರಜ್ಞೆ, ಸಮಾನತೆ, ಕಾಯಕ ಮತ್ತು ದಾಸೋಹ*

## ಪೀಠಿಕೆ

ಹನ್ನೆರಡನೆ ಶತಮಾನದ ಸಂತ, ತತ್ವಜ್ಞಾನಿ ಮತ್ತು ಸಮಾಜ ಸುಧಾರಕರಾಗಿದ್ದ ಬಸವಣ್ಣನವರು ಕನ್ನಡ ಸಾಹಿತ್ಯಲೋಕಕ್ಕೆ ವಚನಗಳ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ. ಅವರ ಬೋಧನೆಗಳು ಜಾತಿಭೇದ, ಲಿಂಗಭೇದ ಮತ್ತು ಮೂಢನಂಬಿಕೆಗಳನ್ನು ವಿರೋಧಿಸುತ್ತವೆ. ಹಾಗೂ ನೈತಿಕ ಮೌಲ್ಯಗಳನ್ನು ಎತ್ತಿಹಿಡಿದು, ಎಲ್ಲರೂ ಸಮಾನರು ಎಂದು ಸಾರಿದರು. 12ನೇ ಶತಮಾನದಲ್ಲಿ ವಚನ ಚಳುವಳಿ ಪ್ರಾರಂಭವಾಗಲು ಹಲವಾರು ಸಾಮಾಜಿಕ ಕಾರಣಗಳಿದ್ದವು. ಜಾತೀಯತೆ, ಸ್ತ್ರೀ ಶೋಷಣೆ, ಮೌಢ್ಯ, ಅನಕ್ಷರತೆ, ಬಡವ–ಶ್ರೀಮಂತ ಇಂತಹ ಹಲವಾರು ಸಮಸ್ಯೆಗಳಿಗೆ ಒಮ್ಮೆಲೆಗೆ ಪರಹಾರವನ್ನು ಸೂಚಿಸುವ ಸಲುವಾಗಿಯೇ ಬಸವಣ್ಣನವರ ಜೊತೆಗೆ ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ ಬಹುರೂಪಿ

***Please cite this article as:*** ಚನ್ನಮ್ಮ ಸಿದ್ರಾಮಪ್ಪ. (2026). ಬಸವಣ್ಣನವರ ವಚನಗಳಲ್ಲಿ ನೈತಿಕ ಪ್ರಜ್ಞೆ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(6), 94–103

ಚೌಡಯ್ಯ, ಮೋಳಿಗೆ ಮಾರಯ್ಯ, ಮೋಳಿಗೆ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಅಂಬಿಗರ ಚೌಡಯ್ಯ, ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಮಾದಾರ ಚನ್ನಯ್ಯ, ಸಕಲೇಶ ಮಾದರಸ ಹೀಗೆ ನೂರಾರು ಶರಣರನ್ನು ಒಳಗೊಂಡು ಸಮಸಮಾಜವನ್ನು ನಿರ್ಮಿಸಬೇಕೆಂದು ಪಣತೊಟ್ಟು, ಅನುಭವ ಮಂಟಪವನ್ನು ನಿರ್ಮಿಸಿ ಅದರಲ್ಲಿ ಅಲ್ಲಮಪ್ರಭುಗಳನ್ನು ಪೀಠಾಧಿಪತಿಯನ್ನಾಗಿ ಮಾಡಿ ಸರ್ವರೂ ಮುಕ್ತವಾಗಿ ತಮ್ಮ ಜೀವನಾನುಭವಗಳನ್ನು ಹಂಚಿಕೊಳ್ಳಲು ವೇದಿಕೆಯನ್ನು ನಿರ್ಮಿಸಿಕೊಟ್ಟರು. ಅದು ಜಗತ್ತಿನ ಮೊದಲ ಸಂಸತ್ತೆಂದು ಹೆಸರುವಾಸಿಯಾಯಿತು.

ಇದೇ ಸಂದರ್ಭದಲ್ಲಿ ಧ್ವನಿಯಿಲ್ಲದವರಿಗೆ ಧ್ವನಿ ನೀಡಿದ್ದು ವಚನ ಸಾಹಿತ್ಯ. ಅವರು ಸಾಹಿತ್ಯ ರಚನೆ ಮಾಡಬೇಕೆನ್ನುವ ಯಾವುದೇ ಉದ್ದೇಶದಿಂದ ಬರೆದುದಲ್ಲ. ಬದಲಿಗೆ ಬದುಕಿನ ಸತ್ಯದರ್ಶನ ಮಾಡಿಸಬೇಕೆಂಬ ಕಾರಣಕ್ಕೆ ಬರೆದುದಾಗಿದೆ. "ಬಹುಕಾಲದಿಂದಲೂ ಪಂಡಿತರ ತುತ್ತಾಗಿದ್ದ, ವಿಶಿಷ್ಟ ವರ್ಗದವರ ಸೊತ್ತಾಗಿದ್ದ ರಾಜ್ಯಲಕ್ಷ್ಮೀಯ ತೊತ್ತಾಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವದ ಕಮ್ಮಟದಲ್ಲಿಯೇ ಅಚ್ಚೊತ್ತಿದ್ದ ವಚನ ನಾಣ್ಯಗಳನ್ನು ಜನಸಾಮಾನ್ಯರಲ್ಲೆಲ್ಲಾ ಸಲ್ಲುವಂತೆ ಹರಡಿಸಿದವರು ವಚನಕಾರರು. ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿರುವ ಪವಾಡ ವಚನಕಾರರದು". ಜನಸಾಮಾನ್ಯರ ಆಡುಭಾಷೆಗೆ ಮಹತ್ವ ನೀಡಿದುದು ಒಂದು ಸಾಹಸ ಸದೃಶ ಪ್ರಕ್ರಿಯೆಯೆಂದೇ ತಿಳಿಯಬೇಕು. ಕನ್ನಡ ಪಂಡಿತ, ಪಾಮರರ ಭಾಷೆಯಾಗದೇ ಜನಸಾಮಾನ್ಯರ ಹೃದಯದ ಭಾಷೆಯಾದುದಕ್ಕೆ ಇನ್ನೂ ತನ್ನಲ್ಲಿ ಜೀವಂತಿಕೆ ಸತ್ವವನ್ನು ಉಳಿಸಿಕೊಂಡು ಸಾಗುತ್ತಿದೆ.

ಹನ್ನೆರಡನೆಯ ಶತಮಾನದಲ್ಲಿ ಅಸ್ಪೃಶ್ಯತೆ ಎಷ್ಟರಮಟ್ಟಿಗಿತ್ತೆಂದರೆ, ಹಾದಿಬೀದಿಯಲ್ಲಿ ಹೀನ ಕುಲವೆಂದು ವರ್ಗೀಕರಿಸಲ್ಪಟ್ಟವರು ನಡೆದಾಡುವ ಹಾಗೆ ಇರಲಿಲ್ಲ. ಮೇಲ್ವರ್ಗದವರ ಮೇಲೆ ಇವರ ನೆರಳು ಬೀಳುವಂತಿರಲಿಲ್ಲ. ಮಧ್ಯಾಹ್ನ ಹನ್ನೆರಡು ಗಂಟೆಯ ಸಂದರ್ಭದಲ್ಲಿ ಮಾತ್ರವೇ ಅವರು ನಡೆದಾಡಬೇಕಾದ ಸನ್ನಿವೇಶವಿದ್ದಿತು. ಇಂತಹ ದೀನರಿಗೆಲ್ಲಾ ಧ್ವನಿ ನೀಡಿದುದು ವಚನ ಚಳುವಳಿ. ನೊಂದವರ ಬಾಳಿಗೆ ಬೆಳಕು ತರುವುದಲ್ಲದೇ ಶಾಶ್ವತವಾಗಿ ನೂರಾರು ವರ್ಷಗಳ ಕಾಲ ಅಚ್ಚಳಿಯದೇ ಉಳಿಯಬಹುದಾದ ಅಂಶವನ್ನು ವಚನ ಸಾಹಿತ್ಯ ತನ್ನ ಗರ್ಭದಲ್ಲಿರಿಸಿಕೊಂಡಿತು. "ವಚನಗಳು, ವಚನಕಾರರು ತಮ್ಮ ಪರಿಸರದೊಡನೆ ಸ್ಪಂದಿಸಿದ ಕ್ರಿಯೆಯ ಫಲಗಳು, ಅವು ಮೂಲತಃ ಪ್ರತಿಭಟನಾತ್ಮಕವಾಗಿವೆ. ಅವುಗಳ ಒಟ್ಟು ಉದ್ದೇಶ, ನವ ಸಮಾಜವೊಂದರ ನಿರ್ಮಾಣವೇ" ಎಂದು ಡಾ. ಎಂ. ಚಿದಾನಂದಮೂರ್ತಿ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಸತ್ಯವಾದುದಾಗಿದೆ.

ಯಾವುದೇ ಒಂದು ಸಮಾಜ, ರಾಷ್ಟ್ರ ಮುಂದುವರಿಯಬೇಕಾದರೆ ಅಲ್ಲಿನ ಧಾರ್ಮಿಕ ಆಚರಣೆಗಳೊಂದಿಗೆ ನೈತಿಕ ನಿಯಮ ನಿರ್ಮಾಣವೂ ಆಗಿದೆ. ಒಂದೊಂದು ಸಮಾಜಕ್ಕೂ ಒಂದೊಂದು ನೀತಿಯ ನೆಲೆಗಟ್ಟು ಇರುತ್ತದೆ. ಅದು ದೇಶ–ಕಾಲವನ್ನು ಅವಲಂಬಿಸಿ ಭಿನ್ನವಾಗಿರಬಹುದು. ಅಲ್ಲದೆ ಒಂದು ಕಾಲಕ್ಕೆ ಇದ್ದ ನೀತಿ ಮತ್ತೊಂದು ಕಾಲಕ್ಕೆ ಅನೀತಿ ಆಗಿರಲೂಬಹುದು. ಹೀಗಾಗಿ ಇದೊಂದು ಸಾಪೇಕ್ಷವಾದುದು, ದೇಶ ಕಾಲ ಪರಿಮಿತವಾದುದು.

ಹೀಗಿದ್ದಾಗ್ಯೂ ವಚನಕಾರರು ನಿರೂಪಿಸಿದ ಸಾಮಾಜಿಕ ನೀತಿಗಳು ಶಾಶ್ವತ ಮೌಲ್ಯವನ್ನು ಹೊಂದಿವೆ. ಇವು ಸಾರ್ವಕಾಲಿಕವಾದವು, ಚಿರಂತನವಾದ ಬಾಳಿಗೆ ಬೆಳಕು ಕೊಡಬಲ್ಲ ಸಾಮಾಜಿಕ ತತ್ವ, ಸಿದ್ಧಾಂತಗಳು ಅನುಷ್ಠಾನಕ್ಕೆ ಬಂದ ಅವರ ಕ್ರಾಂತಿ ಎಂದೆಂದಿಗೂ ಆದರ್ಶಪ್ರಾಯ. ವಚನಕಾರರು ಕೈಹಾಕದ, ವಿಚಾರ ಮಾಡದ ವಿಷಯಗಳೇ ಇಲ್ಲ. ಅದರಲ್ಲೂ ಸಾಮಾಜಿಕ

ನೀತಿಯನ್ನು ಹೇಳುವಲ್ಲಿ ತಮಗೆ ತಾವೇ ಹೇಳಿಕೊಂಡು ಅದರ ಮೂಲಕ ಸಮಾಜವನ್ನು ತಿದ್ದಲು ಪ್ರಯತ್ನಿಸಿದವರು. ಕೆಲವೊಮ್ಮೆ ಸಮಾಜದಲ್ಲಿಯ ಅನ್ಯಾಯ, ಅನೀತಿಗಳನ್ನು ಕಂಡು ಸಿಡಿದೆದ್ದರು. ಈ ವಚನ ಚಳುವಳಿಗೆ ಮೂಲ ಅಡಿಪಾಯ ಹಾಕಿದ ಬಸವಣ್ಣನವರ ಚಿಂತನೆ ನೊಂದವರಿಗೆ ಮಿಡಿಯುವುದಾಗಿತ್ತು. ಅದಲ್ಲದೇ ಅದು ವಿಶ್ವಮಾನ್ಯವಾಗುವಂತಹ ಉದಾತ್ತ ಅಂಶಗಳನ್ನು ಒಳಗೊಂಡಿತ್ತು ಎಂಬುದಕ್ಕೆ ಅವರ ಅನೇಕ ವಚನಗಳು ಸಾಕ್ಷಿಯಾಗಿವೆ.

**ಅತಿಥಿ ಸತ್ಕಾರ**: ಮನೆಗೆ ಬಂದ ಅತಿಥಿಗಳನ್ನು ಗೌರವಯುತವಾಗಿ ನಡೆಸಿಕೊಳ್ಳುವುದು ಈ ನೆಲದ ಸಂಸ್ಕಾರ. ಆ ರೀತಿಯ ನಡೆಯನ್ನು ಮೀರುವವರನ್ನು ಕುರಿತು ನಿಷ್ಠುರದ ಮಾತುಗಳನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ.

***"ಏನಿ ಬಂದಿರಿ, ಹದುಳಿದ್ದಿರೆ ಎಂದಡೆ***
***ನಿಮ್ಮೈಸಿರಿ ಹಾರಿ ಹೋಹುದೆ?***
***ಕುಳ್ಳಿರೆಂದಡೆ ನೆಲ ಕುಳಿಹೋಹುದೆ?***
***ಒಡನೆ ನುಡಿದಡೆ ಸಿರ, ಹೊಟ್ಟೆಯೊಡೆವುದೆ?***
***ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ***
***ಮೂಗ ಕೊಯ್ವುದ ಮಾಬನೆ ಕೂಡಲಸಂಗಮದೇವಯ್ಯ"***
**(ಬ.ವ.ಸಂ,ವ–241,ಪು–60)**

ಮನೆಗೆ ಬಂದಂಥ ಯಾವುದೇ ಅತಿಥಿಯನ್ನು ಆದರದಿಂದ ಬರಮಾಡಿಕೊಳ್ಳುವುದು ನಮ್ಮ ಸಂಸ್ಕಾರವಾಗಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದಾರೆ. ಬಂದವರನ್ನು ಸತ್ಕರಿಸದೇ ಇರುವುದು ಮಾನವೀಯತೆಯ ಲಕ್ಷಣವಲ್ಲ ಎಂಬುದನ್ನು ಒತ್ತಿ ಹೇಳಿದ್ದಾರೆ. ಒಬ್ಬರನ್ನು ಪ್ರೀತಿಸುವುದರಿಂದ ಕಳೆದುಕೊಳ್ಳುವುದೇನಿದೆ, ಎಂದೂ ಏನೂ ಕೊಡದಿದ್ದರೂ ಚಿಂತೆಯಿಲ್ಲ ಗುಣವಿಲ್ಲದಿದ್ದರೆ ಕೂಡಲಸಂಗಮದೇವ ಶಿಕ್ಷಿಸದೇ ಬಿಡುವನೇ' ಎಂದು ನೀತಿ ಹೇಳಿದ್ದಾರೆ. ಅಲ್ಲದೆ 'ತಮ್ಮನ್ನು ತಾವು ತಿದ್ದಿಕೊಂಡರೆ ಸಾಕು', 'ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವಾ' ಎಂದು ತಿಳಿಹೇಳುತ್ತಾರೆ.

**ಪ್ರಾಣಿ ಹಿಂಸೆ ಮಹಾಪಾಪ** : ತಮ್ಮ ಜೀವನದ ಆಗತ್ಯಗಳನ್ನು ಪೂರೈಸಿಕೊಳ್ಳಲು ದೇವರ ಹೆಸರಿನಲ್ಲಿ ಹರಕೆಯನ್ನು ಕಟ್ಟಿಕೊಂಡು ಪ್ರಾಣಿಗಳನ್ನು ಬಲಿಕೊಡುವುದು ಅಷ್ಟೊಂದು ಸಮಂಜಸವಲ್ಲ, ಅದೊಂದು ಮೌಢ್ಯದ ಪರಮಾವಧಿಯಾಗುತ್ತದೆ. ಒಂದು ಪ್ರಾಣಿಯನ್ನು ಕೊಂದು ಯಾರೂ ಇಲ್ಲಿ ಶಾಶ್ವತವಾಗಿ ಉಳಿಯಲು ಸಾಧ್ಯವಿಲ್ಲ ಎಂಬ ಮಾತುಗಳನ್ನು ವಚನದ ಮೂಲಕ ಬಸವಣ್ಣನವರು ಅರುಹಿದ್ದಾರೆ.

***"ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು.***
***ಕೊಂದಹರೆಂಬುದನರಿಯದೆ ಬೆಂದ ಒಡಲ ಹೊರೆವುತ್ತಲಿದೆ.***
***ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು.***
***ಕೊಂದವರುಳಿವರೆ ಕೂಡಲಸಂಗಮದೇವಾ"***
**(ವ.ಸಂ–1,ವ–129,ಪು–21)**

ಹಬ್ಬ ಹರಿದಿನ ಬಂತೆಂದರೆ ಸಾಕು ಪಶು, ಪಕ್ಷಿಗಳನ್ನು ಬಲಿಕೊಡುವ ಅನಿಷ್ಠ ಪದ್ಧತಿ ಹಿಂದಿನಿಂದಲೂ ಚಾಲ್ತಿಯಲ್ಲಿತ್ತು, ಅಂಥಹದ್ದೇ ಸಂಗತಿಯನ್ನಿರಿಸಿಕೊಂಡು ಬಸವಣ್ಣನವರು ಈ ವಚನವನ್ನು ರಚಿಸಿದ್ದಾರೆ. ಹರಕೆಯ ಕುರಿ ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ತನ್ನ ಬಲಿಯಾಗುತ್ತದೆ ಎಂಬುದನ್ನರಿಯದೇ ತಕ್ಷಣದ ತನ್ನ ಹಸಿವನ್ನು ನೀಗಿಸಿಕೊಳ್ಳುವ ಪ್ರಯತ್ನದಲ್ಲಿ ತೋರಣದ ತಳಿರನ್ನೇ ತಿನ್ನುತ್ತಿರುತ್ತದೆ. ಅದನ್ನು ಕೊಂದವನು ಉಳಿಯಲು ಸಾಧ್ಯವೇ ಎಂದು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ. ಇಂದು ವಿಶ್ವದಾದ್ಯಂತ ಈ ಹಿಂಸಾಪ್ರವೃತ್ತಿ ನಿತ್ಯ ನಿರಂತರವಾಗಿ ನಡೆಯುತ್ತಿದೆ. ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳನ್ನು ಹರಕೆಯ ಕುರಿಯಂತೆ ನಡೆಸಿಕೊಳ್ಳುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಅವರ ತಕ್ಷಣದ ಅವಶ್ಯಕತೆಗಳನ್ನು ಪೂರೈಸಿಕೊಡುವುದರ ಮೂಲಕ, ಕಡೆಯತನಕ ತನ್ನ

ಪರವಾಗಿಯೇ ನಿಲ್ಲುವಂತೆ ಮಾಡುವ ಧೋರಣೆಯೂ ಸಹ ಬಲಿಯಂತೆಯೇ ಭಾಸವಾಗುತ್ತದೆ.

*"ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,*
*ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ.*
*ಉಂಬ ಜಂಗಮ ಬಂದಡೆ ನಡೆಯೆಂಬರು,*
*ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ.*
*ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,*
*ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ"*
**(ಬ.ವ.ಸಂ,ವ–194,ಪು–49)**

ನಾಗರಪಂಚಮಿಯ ಸಂದರ್ಭದಲ್ಲಿ ಕಲ್ಲಿನ ಹಾವಿಗೆ ಹಾಲನ್ನೆರೆದು ಪೂಜೆ ಮಾಡುವ ಜನರು, ಜೀವಂತ ಹಾವನ್ನು ಕಂಡರೆ ಕೊಲ್ಲುವಂತಹ ಕ್ರೌರ್ಯವನ್ನು ಮೆರೆಯುತ್ತಾರೆ. ಉಣ್ಣದೇ ಇರುವ ಲಿಂಗಕ್ಕೆ ನೈವೇದ್ಯ ಇಡುವ ಜನ ಜಂಗಮ ದಾಸೋಹವನ್ನರಸಿ ಬಂದರೆ ಆತನನ್ನು ಕಡೆಗಣಿಸುತ್ತಾರೆ. ಈ ರೀತಿಯ ದ್ವಂದ್ವ ನಡೆಯನ್ನು ಬಸವಣ್ಣನವರು ಖಂಡಿಸಿದ್ದಾರೆ.

**ದಯವೇ ದೊಡ್ಡ ಧರ್ಮ:**

*"ದಯವಿಲ್ಲದ ಧರ್ಮವದೇವುದಯ್ಯಾ?*
*ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ.*
*ದಯವೇ ಧರ್ಮದ ಮೂಲವಯ್ಯಾ,*
*ಕೂಡಲಸಂಗಯ್ಯನೆಂತಲ್ಲದೊಲ್ಲನಯ್ಯಾ"*
**(ಬ.ವ.ಸಂ,ವ–247,ಪು–61)**

ಈ ವಚನದಲ್ಲಿ ಬಸವಣ್ಣನವರು ಧರ್ಮದಲ್ಲಿ ಏನಿರಬೇಕೆಂಬುದನ್ನು ನಿಖರವಾಗಿ ಸ್ಪಷ್ಟಪಡಿಸಿದ್ದಾರೆ. ಧರ್ಮದಲ್ಲಿ ದಯವೇ ಮೂಲ ಶ್ರೋತ್ರವಾಗಿರಬೇಕು. ಧರ್ಮದಲ್ಲಿ ದಯವೇ ಮೂಲ ತಂತುವಾಗಿದೆ. ದಯೆ, ಮರುಕ, ಅನುಕಂಪವಿಲ್ಲದಿದ್ದರೆ ಅದನ್ನು ಧರ್ಮವೆಂದು ಹೇಳುವುದು ಹೇಗೆ ಎಂಬ ಪ್ರಶ್ನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಯಾವುದೇ ಧರ್ಮವಾದರೂ ಸರಿಯೇ ಅಲ್ಲಿ ದಯೆ ಜಿನುಗುತ್ತಿರಬೇಕು. ಜಗತ್ತಿನಲ್ಲಿ ಪ್ರತಿ ಜೀವಿಗೂ ಭೂಮಿಯ ಮೇಲೆ ಬದುಕುವ ಹಕ್ಕಿದೆ. ಮಾನವ, ಪ್ರಾಣಿ, ಪಕ್ಷಿ ಹೀಗೆ ಸಕಲ ಜೀವರಾಶಿಗಳಲ್ಲೂ ನಾವು ಪ್ರೀತಿ–ಪ್ರೇಮ–ದಯೆಯನ್ನು ಕಾಣಬೇಕು. ಧರ್ಮದ ಜೀವದ್ರವ್ಯ ದಯೆ. ಹೀಗಿರುವಾಗ ಪ್ರತಿಯೊಂದು ಜೀವಿಗಳ ಬಗೆಗೆ ಪ್ರೀತಿ, ಕಾಳಜಿಯನ್ನು ಹೊಂದಬೇಕು. ಅಂದಾಗ ಅದು ಜೀವಪರ ನಿಲುವಾಗಿ ಪರಿಣಮಿಸುತ್ತದೆ. ಎಲ್ಲ ಜೀವಿಗಳನ್ನೂ ತನ್ನಂತೆ ನೋಡುವವನೇ ನಿಜ ಶರಣ. ಮತ್ತೊಂದು ಜೀವವನ್ನು ಕಬಳಿಸುವುದೇ ಅದು ಅಧರ್ಮವೆನಿಸುವದು.

ಜಗತ್ತಿನಲ್ಲಿ ನಾವೂ ಬದುಕಬೇಕು, ಬೇರೊಬ್ಬರೂ ಬದುಕಬೇಕು. ಅಲ್ಲದೇ ಸಕಲ ಜೀವರಾಶಿಗಳೂ ಬದುಕಬೇಕು. ಇದು ಸಾಮರಸ್ಯದ ಬದುಕು. ಎಲ್ಲ ಜೀವರಾಶಿಗಳ ಲೇಸನ್ನು ಬಯಸುವುದು ಅದೇ ಧರ್ಮ. ಒಬ್ಬರಿಗೊಬ್ಬರು, ಒಂದಕ್ಕೊಂದು ಕೂಡಿ ಬಾಳುವುದು, ನೋಡಿ ಬಾಳುವುದು ಅದೇ ನಿಜದ ನಿಲುವಿನ ಬದುಕು. ಪ್ರೀತಿ–ಪ್ರೇಮ–ವಾತ್ಸಲ್ಯ–ಅನುಕಂಪ–ಭ್ರಾತೃತ್ವ–ಸೌಹಾರ್ದತೆ ಈ ಭಾವಗಳ ಮೊತ್ತವೇ ಧರ್ಮವಾಗಿದೆ. ಇನ್ನೊಂದು ಅರ್ಥದಲ್ಲಿ ದಯವೇ ಧರ್ಮವೆಂಬುದನ್ನು ಬಸವಣ್ಣನವರು ಜೀವಪರ ನಿಲುವಿನ ಬದ್ಧತೆಯನ್ನು ಪ್ರತಿಪಾದಿಸಿದ್ದಾರೆ. ಆಂಗ್ಲ ಭಾಷೆಯಲ್ಲಿ "ಒಇಖಅಜ ಖಇಂಖಔಓಇಆ ಎಗಖಖಿಖಅಇ" ಎಂಬ ಶೇಕ್ಸಪೀಯರ್‌ನ ಮಾತೂ ಕೂಡ ಇದನ್ನೇ ಸಮರ್ಥಿಸುತ್ತದೆ.

ನಾವು ಬಸವಣ್ಣನವರ ಈ ಮಾತನ್ನು ಉಲ್ಲಂಘಿಸಿ ಧರ್ಮ, ಭಾಷೆ ಹಾಗೂ ಇನ್ನಿತರ ಅನೇಕ ಸಮಸ್ಯೆಗಳ ಅಧಾರದ ಮೇಲೆ ಜಗತ್ತನ್ನು ಒಂದು ರಣರಂಗವನ್ನಾಗಿ ಮಾಡಿದ್ದೇವೆ. ಬಸವಣ್ಣನವರ ಈ ವಚನ ವಿಶ್ವಸಂಸ್ಥೆಯ ಮೂಲ ಮಂತ್ರವಾಗಿ ಇದು ರಾಷ್ಟ್ರಗಳ, ದೇಶ, ದೇಶಗಳ, ಸಮಾಜ – ಸಮಾಜಗಳ ಮತ್ತು ಧರ್ಮ–ಧರ್ಮಗಳ ನಡುವಣ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವ ಸಾಧನವಾಗಬೇಕು. ನಿಜವಾದ ಧರ್ಮ

ಬಸವಣ್ಣನವರ ಈ ಕೆಳಗೆ ಕಾಣಿಸಿದ ಈ ಸಪ್ತಸೂತ್ರಗಳಲ್ಲಿ ಕ್ರೋಢೀಕೃತವಾಗಿದೆ.

> ***"ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ.***
> ***ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,***
> ***ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.***
> ***ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ***
> ***ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ"*** **(ಬ.ವ.ಸಂ,ವ–235,ಪು–59)**

ಈ ಸಪ್ತ ಸೂತ್ರಗಳು(ಸಪ್ತಘಾತುಕಗಳು) ವ್ಯಕ್ತಿ, ಸಮಾಜ, ದೇಶ ಹಾಗೂ ಇಡೀ ಮಾನವ ಜನಾಂಗದ ಉದ್ಧಾರಕ್ಕೆ ತಾರಕ ಮಂತ್ರಗಳಾಗಿವೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ರೀತಿ ಬಸವಣ್ಣನವರು ಮಾನವರನ್ನು ವಿಂಗಡಿಸುವ ಅಂಧ ಸಾಂಪ್ರದಾಯಿಕ ಶ್ರದ್ಧೆಯನ್ನು ವಿರೋಧಿಸಿ ಚಿರಂತನ ಮೌಲ್ಯಗಳ ಆಧಾರದ ಮೇಲೆ ವಿಶ್ವ ಬಂಧುತ್ವವನ್ನು ಸ್ಥಾಪಿಸುವ ದಿಶೆಯಲ್ಲಿ ಇಡೀ ಜಗತ್ತಿಗೆ ಮಾರ್ಗದರ್ಶನ ಮಾಡಿದ್ದಾರೆ. ಅವರ ಈ ತತ್ವಗಳು ಇಂದಿನ ಜನಾಂಗಕ್ಕೆ ಹೆಚ್ಚು ಪ್ರಸ್ತುತವಾಗಿವೆ. ಇವುಗಳನ್ನು ಆಚರಣೆಯಲ್ಲಿ ತಂದು ನಮ್ಮ ರಾಷ್ಟ್ರವನ್ನು ಇಡೀ ಭೂಮಂಡಲವನ್ನು ವಿನಾಶದ ಅಂಚಿನಿಂದ ಪಾರುಮಾಡಬೇಕಾಗಿದೆ.

ಭಾರತವು ಪರಕೀಯರ ಧಾಳಿಗೆ ನಿರಂತರವಾಗಿ ಒಳಗಾಗಿ, ಮಾನವ ಸಂಪತ್ತು, ಪ್ರಕೃತಿ ಸಂಪತ್ತು, ಬೌದ್ಧಿಕ ಸಂಪತ್ತು ಮತ್ತು ಸಾಂಸ್ಕೃತಿಕ ಸಂಪತ್ತನ್ನು ಕಳೆದುಕೊಂಡು ದಾಸ್ಯದಲ್ಲಿ ಬದುಕುವಂತಹ ಪರಿಸ್ಥಿತಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡೆ ಬಂದಿತು. ಹೀಗಿರುವ ಸಂದರ್ಭದಲ್ಲಿ ಭಾರತದಲ್ಲಿಯೇ ಸಾಹಿತ್ಯಕ ಚಳುವಳಿ ನಡೆದು, ಹಿಂಸಾ ಪ್ರವೃತ್ತಿ, ಕಳ್ಳತನದ ಪ್ರವೃತ್ತಿ, ಕೊಲ್ಲುವ ಪ್ರವೃತ್ತಿ ನಡೆಯಬಾರದೆಂಬ ಜಾಗೃತಿಯನ್ನು ಜನರಲ್ಲಿ ಮೂಡಿಸುವ ಪ್ರಕ್ರಿಯೆ ಪ್ರಾಮಾಣಿಕವಾಗಿ ಬಸವಣ್ಣನವರ ನೇತೃತ್ವದಲ್ಲಿ ನಡೆಯಿತು.

ಈ ವಚನವು ಬದುಕನ್ನು ಹಸನುಮಾಡಿಕೊಳ್ಳಲು ಬೇಕಾದಂತಹ ಮೌಲ್ಯಯುತವಾದ ಸಂದೇಶವನ್ನು ಜಗತ್ತಿಗೆ ಸಾರಿದೆ. ಮಹಾಮಾನವತಾವಾದಿ ಬಸವಣ್ಣನವರು ಹೇಳಿದ ಮಾತುಗಳಿವು. ಈ ವಚನವನ್ನು ಅನುಸರಿಸಿ ನಡೆದರೆ ಜೀವನ ಪಾವನವಾಗುವುದರಲ್ಲಿ ಸಂದೇಹವಿಲ್ಲ. ಇವು ಜೀವನವನ್ನು ಸುಂದರವಾಗಿಸಲು ಬೇಕಾದ ಸಪ್ತ ಸೂತ್ರಗಳೆಂದು ಪ್ರಸಿದ್ಧಿ ಪಡೆದಿವೆ. ಈ ಸೂತ್ರಗಳೇ ಬದುಕಿಗೆ ಆಧಾರಸ್ತಂಭ. ಇವು ತುಂಬ ಸರಳ, ಅರ್ಥಪೂರ್ಣವಾದ ಮಾತುಗಳಾಗಿವೆ. ಈ ವಚನದಲ್ಲಿ ವಿಶೇಷ ಧ್ವನಿ ಇದೆ. ವ್ಯಕ್ತಿ ಈ ಸೂತ್ರಗಳನ್ನು ಪಾಲಿಸಿದರೆ ಬದುಕು ಮಾದರಿಯಾಗುತ್ತದೆ. ಇದರಿಂದ ಮಾನಸಿಕ ಸ್ವಾಸ್ಥ್ಯ ಕಾಪಾಡಿದಂತಾಗುವದು. ಸಪ್ತ ಸೂತ್ರಗಳ ಹಂಗು ತೊರೆದಾಗ ಜೀವಿ ಧನ್ಯನಾಗುತ್ತಾನೆ. ಇದರಿಂದ ಅವನ ಅಂತರಂಗ–ಬಹಿರಂಗ ಶುದ್ಧೀಕರಣಗೊಂಡು ಸಾಧನಾ ಪಥದಲ್ಲಿ ಸಾಗಲು ಸಾಧ್ಯ. ತನ್ನಲ್ಲಿಯ ಅಹಂಕಾರ, ಆತ್ಮ ಪ್ರಶಂಸೆ ಬಿಟ್ಟಾಗ ಮನಸ್ಸು ನಿರಾಳವಾಗಿ ಪ್ರಸನ್ನತೆ ಹೊಂದುತ್ತದೆ. ಪ್ರಸನ್ನತೆ, ಶಾಂತತೆ ಇರುವಲ್ಲಿ ಪರಮಾತ್ಮ ಸದಾ ನೆಲೆಸಿರುತ್ತಾನೆ. ಆಗ ಮಾನವ ಮಹಾದೇವನಾಗುವನು.

ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ನಡೆಯಬೇಕು. ಅದರಿಂದ ವ್ಯಕ್ತಿ ದೊಡ್ಡವನಾಗುವನು. ಎಲ್ಲರೂ ಅವನನ್ನು ಪ್ರೀತಿ–ಗೌರವದಿಂದ ಕಾಣುವರು. ಸ್ವಾಮಿ ವಿವೇಕಾನಂದರು 'ನಿನ್ನ ಹೃದಯದಲ್ಲಿ ಪ್ರಾಮಾಣಿಕತೆ ತುಂಬಿದ್ದರೆ, ನಿನ್ನ ಶತ್ರು ಮಾತ್ರವಲ್ಲ, ಇಡೀ ಪ್ರಪಂಚ ನಿನ್ನೆದುರು ಆಯುಧವನ್ನು ಕೆಳಗಿಡುತ್ತದೆ' ಎಂದು ಹೇಳಿ 'ಸತ್ಯಕ್ಕಾಗಿ ಯಾವುದನ್ನು ಬೇಕಾದರೂ ತ್ಯಾಗ ಮಾಡಿ ಆದರೆ, ಯಾವುದಕ್ಕೂ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ' ಎಂದಿರುವದು ಪ್ರಾಮಾಣಿಕತೆ ಮತ್ತು ಸತ್ಯದ ಮಹತ್ವವನ್ನು ಅರಿಯಬಹುದಾಗಿದೆ.

**ಪರಧನ ಮತ್ತು ಪರಸ್ತ್ರೀ ಮೋಹ ತ್ಯಾಗ:** ಬಸವಣ್ಣನವರು ಬಿತ್ತಿದ ಮತ್ತೊಂದು ಮೌಲ್ಯಯುತವಾದ ಸಂದೇಶವೆಂದರೆ, ಯಾವುದೇ

ವ್ಯಕ್ತಿಯಾಗಲಿ ಪರರ ಹಣಕ್ಕೆ ಮತ್ತು ಪರಸತಿಗೆ ಮೋಹಿಸುವುದು ಅಕ್ಷ್ಯಮುಪರಾಧವೆಂದು ಕರೆದಿದ್ದಾರೆ. ಇದು ವ್ಯಕ್ತಿತ್ವದ ಘನತೆಯನ್ನು ಉನ್ನತೀಕರಿಸಿಕೊಳ್ಳಲು ಇರುವಂತಹ ಪ್ರಾಮಾಣಿಕ ಮಾರ್ಗವೆಂದು ತಿಳಿಸಿದ್ದಾರೆ.

***"ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ,***
***ಸುರಗಿಯ ಮೊನೆಗಂಜೆ,***
***ಒಂದಕ್ಕಂಜುವೆ, ಒಂದಕ್ಕಳುಕುವೆ :***
***ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ.***
***ಮುನ್ನಂಜದ ರಾವಳನೇವಿಧಿಯಾದ!***
***ಅಂಜುವೆನಯ್ಯಾ ಕೂಡಲಸಂಗಮದೇವಾ"***
**(ಬ.ವ.ಸಂ,ವ–447,ಪು–108)**

ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಪರಸ್ತ್ರೀ ಮತ್ತು ಪರಧನದ ಮೇಲಿನ ವ್ಯಾಮೋಹದಿಂದಲೇ ರಾವಣ ಮತ್ತು ದುರ್ಯೋಧನರ ಪಾಳಯವೆಲ್ಲವೂ ಅವನತಿಗೆ ಬಳಗಾದ ಅಂಶವನ್ನು ಗಮನಿಸಬಹುದು.

ಶಿವಯೋಗಿ ಸಿದ್ಧರಾಮರ ವಚನವು ಇದೇ ಮಾದರಿಯಲ್ಲಿ ರಚನೆಯಾಗಿದ್ದು, ಪರಧನ ಮತ್ತು ಪರಸ್ತ್ರೀ ವ್ಯಾಮೋಹವನ್ನು ತ್ಯಜಿಸಬೇಕೆನ್ನುತ್ತಾರೆ. ಅದು ಅಂತರಂಗ ಮತ್ತು ಬಹಿರಂಗವೆರಡರಲ್ಲೂ ಶುದ್ಧತೆಯನ್ನು ಕಾಪಾಡಿಕೊಳ್ಳಲು ಮಾರ್ಗವಾಗುತ್ತದೆ ಎಂಬ ಅಂಶವನ್ನು ಪ್ರಸ್ತಾಪಿಸಿದ್ದಾರೆ.

**ಜಾತಿ ಭೇದದ ವಿರೋಧ:**

ಶರಣರ ದೃಷ್ಟಿಯಲ್ಲಿ ಎರಡೇ ಪಂಗಡ, ಭಕ್ತ–ಭವಿ ಚಾತುರ್ವರ್ಣ್ಯ ಹುಟ್ಟಿನಿಂದ ಬರುವ ಜಾತಿಯನ್ನೇ ವ್ಯಕ್ತಿಯ ಮೇಲು–ಕೀಳುಗಳಿಗೆ ಅಳತೆಗೋಲೆಂದು ಪರಿಗಣಿಸಿದ್ದ ಕಾಲದಲ್ಲಿ ಅದನ್ನು ಬುಡ ಸಮೇತ ಕತ್ತರಿಸಿ ಹಾಕಲು ಶರಣರು ಪ್ರಯತ್ನಿಸಿದರು.

***"ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ.***
***ಕುಲವೇನೋ ಆವಂದಿರ ಕುಲವೇನೊ!***
***ಸಕಲಜೀವಾತ್ಮರಿಗೆ ಲೇಸನೆ ಬಯಸುವ***
***ನಮ್ಮ ಕೂಡಲಸಂಗನ ಶರಣರೇ ಕುಲಜರು"***
**(ವ.ಸಂ–1,ವ–591,ಪು–55)**

***ಜಾತಿವಿಡಿದು ಸೂತಕವನರಸುವೆ, ಜ್ಯೋತಿವಿಡಿದು ಕತ್ತಲೆಯ ನರಸುವೆ!***
***ಇದೇಕೊ ಮರಳು ಮಾನವಾ, ಜಾತಿಯಲ್ಲಿ ಅಧಿಕನೆಂಬೆ!....***
***ವ್ಯಾಸ ಬೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,***
***ಮಂಡೋದರಿ ಕಪ್ಪೆಯ ಮಗಳು !***
***ಕುಲವನರಸದಿರಿಂ ಭೋ! ಕುಲದಿಂದ ಮುನ್ನೇನಾದಿರಿಂ ಭೋ!***
***ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ.***
***ಕೌಂಡಿನ್ಯನೆಂಬ ಋಷಿ ಮೂರು ಭುವನರಿಯದೆ ನಾವಿದ ಕಾಣಿಭೋ!***
***ನಮ್ಮ ಕೂಡಲಸಂಗನ ವಚನವಿಂತೆಂದುದು:***
***ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂ ಭೋ!"*** **(ವ.ಸಂ–1,ವ–589,ಪು–55)**

"ಚನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರಿಗೆ ಹುಟ್ಟಿದ ಮಗ ನಾನು" ಇದಕ್ಕೆ ಕೂಡಲಸಂಗನೇ ಸಾಕ್ಷಿ ಎಂದು ತಮ್ಮ ಅಹಂಕಾರವನ್ನು ನಿರಸನ ಮಾಡಿಕೊಂಡಿದ್ದಾರೆ. ವರ್ಣಭೇದದಲ್ಲಿಯ ನೀತಿಯ ತಾರತಮ್ಯವನ್ನು ಯುಕ್ತವಾಗಿ ಖಂಡಿಸಲಾಗಿದೆ. ಸಮಾಜದಲ್ಲಿ ಕುಲಗಳೇ ನೂರಾರು ಸೃಷ್ಟಿಯಾದಾಗ ದೇವತೆಗಳ ಸೃಷ್ಟಿಗೆ ಬರವೇ?

***"ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ.***
***ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ!***
***ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೊ!***
***ದೈವ ದೈವವೆಂದು ಕಾಲಿಡಲಿಂಬಿಲ್ಲ.***
***ದೈವನೊಬ್ಬನೆ ಕೂಡಲಸಂಗಮದೇವ"***
**(ವ.ಸಂ–1,ವ–562,ಪು–52)**

ಇವೆಲ್ಲವುಗಳನ್ನು ಹೋಗಲಾಡಿಸಲು ಪ್ರಯತ್ನಿಸಿ–

***"ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ,***
***ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ.***
***ಬೇಡ ಬೇಡ, ಅನ್ಯದೈವದ ಸಂಗ ಹೊಲ್ಲ!***
***ಬೇಡ ಬೇಡ, ಪರದೈವದ ಸಂಗ ಹೊಲ್ಲ!***
***ಬೇಡ ಬೇಡ, ಅನ್ಯದೈವವೆಂಬುದು ಹಾದರ ಕಾಣಿರೋ,***
***ಕೂಡಲಸಂಗಮದೇವ ಕಂಡಡೆ ಮೂಗ ಕೊಯ್ವ ಕಾಣಿರೊ"***
**(ವ.ಸಂ–1,ವ–617,ಪು–57)**

ಎಂದು ಸಮಾಜವನ್ನು ಎಚ್ಚರಿಸಿ ಏಕ ದೇವೋಪಾಸನೆಯನ್ನು ಸಾರಿದರು. ಅದೂ ಇಷ್ಟಲಿಂಗದ ಮೂಲಕ ಶೂದ್ರರಿಗೆ ದೇವಾಲಯಗಳಲ್ಲಿ ಪ್ರವೇಶವಿಲ್ಲವೆಂಬುದನ್ನರಿತು ಪುರೋಹಿತರ ದಬ್ಬಾಳಿಕೆ ಕಂಡು ದೇವಾಲಯಗಳೇ ಬೇಡ ಎಂಬಲ್ಲಿಯತನಕ ಹೋದರು. ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ ಎಂದರು.

***"ಕೂಸುಳ್ಳ ಸೂಳೆ ಧನದಾಸೆಗೊತ್ತೆಯ ಕೊಂಡಡೆ***
***ಕೂಸಿಂಗಲ್ಲ; ಬೊಜಗಂಗಲ್ಲ***
***ಕೂಸನೊಮ್ಮೆ ಸಂತವಿಡುವಳು, ಬೊಜಗನನೊಮ್ಮೆ ನೆರೆವಳು.***
***ಧನದಾಸೆ ಬಿಡದು ಕೂಡಲಸಂಗಮದೇವಾ"***
**(ವ.ಸಂ–1,ವ–101,ಪು–28)**

ಎಂದು ಬಸವಣ್ಣನವರು ಬಹಳ ಮಾರ್ಮಿಕವಾಗಿ ನುಡಿದಿದ್ದಾರೆ. ನಮ್ಮ ಮಾತು 'ಜ್ಯೋತಿರ್ಲಿಂಗ'ದಂತೆ ಇರಬೇಕು. ಅದು ಅನ್ಯರನ್ನು ನೋಯಿಸುವಂತಿರಬಾರದು. ಪುಣ್ಯ–ಪಾಪಗಳೆಂಬವು ತಮ್ಮ ಇಷ್ಟವು ಕಂಡಿರೇ, 'ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ' ಎಂದರು.

**ಮಾತು ನವನೀತ:**

ನಮ್ಮ ಮಾತುಗಳು ಹೇಗಿರಬೇಕು? ಹೇಗಿದ್ದರೆ ಚೆನ್ನ? ಎಂಬುದಕ್ಕೆ ಬಸವಣ್ಣನವರ ಪ್ರಸಿದ್ಧ ವಚನ ಹೀಗಿದೆ;

***"ನುಡಿದಡೆ ಮುತ್ತಿನ ಹಾರದಂತಿರಬೇಕು.***
***ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.***
***ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು.***
***ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.***
***ನುಡಿಯೊಳಗಾಗಿ ನಡೆಯದಿದ್ದಡೆ,***
***ಕೂಡಲಸಂಗಮದೇವನೆಂತೊಲಿವನಯ್ಯ?"***
**(ವ.ಸಂ–1,ವ–803,ಪು–72)**

ಎನ್ನುತ್ತ ನಮ್ಮ ನುಡಿ ಅಂದರೆ ಮಾತು ಹೇಗೆ ಕೂಡಿರಬೇಕೆಂಬುದನ್ನು ಬಹು ಸುಂದರವಾಗಿ ನಿರೂಪಿಸಿದ್ದಾರೆ. ನಾವು ಆಡುವ ಮಾತು ನಮ್ಮ ವ್ಯಕ್ತಿತ್ವವನ್ನು ಮತ್ತು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಮಾತಿಗೆ ಮಹತ್ವ ಬರಬೇಕಾದರೆ ಅವು ವಿಚಾರ ಪರಿಪ್ಲುತವಾಗಿರಬೇಕು. ಬಹಳ ಎಚ್ಚರಿಕೆ, ಪ್ರಜ್ಞೆಯಿಂದ ಮಾತನಾಡಬೇಕು. ಮಾತು ಹಿತ–ಮಿತವಾಗಿರಬೇಕು. ನಯ–ವಿನಯ–ಸೌಜನ್ಯತೆ–ಮೃದುತ್ವದಿಂದ ಕೂಡಿರಬೇಕು. ಆವೇಶ, ಉದ್ವೇಗ, ಆಕ್ರೋಶ, ಸಿಟ್ಟಿನಿಂದ ಕೂಡಿದ ಮಾತುಗಳು ಜಗಳಕ್ಕೆ ದಾರಿ ಮಾಡಿಕೊಡುತ್ತವೆ. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ' ಎಂಬ ಅನುಭವಿಕರ ಮಾತು ಸತ್ಯವಾಗಿದೆ.

ಮಾತನ್ನು ಕುರಿತು ಕವಿ ಚನ್ನವೀರ ಕಣವಿ ಅವರು "ನಾವು ಆಡುವ ಮಾತು ಹೀಗಿರಲಿ ಗೆಳೆಯ, ಮೃದುವಚನ ಮೂಲೋಕ ಗೆಲ್ಲುವದು ತಿಳಿಯ" ಎಂದು ಹೇಳಿದ್ದಾರೆ. ಮಾತು ಬಲ್ಲವನು ಇಡೀ ಜಗತ್ತನ್ನೇ ಗೆದ್ದಂತೆ. ಅಂತ ಶಕ್ತಿಪೂರ್ಣವಾದ, ಅರ್ಥಪೂರ್ಣವಾದ ಮತ್ತು ಧ್ವನಿಪೂರ್ಣವಾದ ಮಾತುಗಳು ನಮ್ಮದಾಗಬೇಕು.

ಒಂದೆಡೆ ವರಕವಿ ದ. ರಾ. ಬೇಂದ್ರೆ ಅವರು "ಮಾತು ಮಾತು ಮಥಿಸಿ ಬಂದ ನಾದದ ನವನೀತ" ಎಂದು ಮಾತುಗಳು ಬೆಣ್ಣೆಯನ್ನು ಕಡೆದಂತಹ ರೀತಿಯಲ್ಲಿ ಬರಬೇಕೆಂದು ಸೊಗಸಾದ ಮಾತಿನ ಪರಿಕಲ್ಪನೆಯನ್ನು ತಿಳಿಸಿದ್ದಾರೆ.

ಮಾತುಗಳಿಂದ ಏನೇನು ಆಗಬಹುದೆಂಬುದನ್ನು ಸರ್ವಜ್ಞನು "ಮಾತಿನಿಂ ನಗೆ ನುಡಿಯು, ಮಾತಿನಿಂ ಹಗೆ ಕೊಲೆಯು" ಎಂದು ಹೇಳಿ ಮಾತೇ ಮಾಣಿಕ್ಯವೆಂಬುದನ್ನು ಹೇಳಿದ್ದಾನೆ. ಮಾತಿನಿಂದ ನಗೆ–ಹೊಗೆ ಬರುತ್ತದೆ. ಅಷ್ಟೇ ಏಕೆ ಮಾತು ಮೃತ್ಯುವಿಗೂ ದಾರಿ ಮಾಡುವದು. ಹೀಗಾಗಿ ಬಹು ಜಾಣೆ, ತಾಳ್ಮೆ, ಕೌಶಲ್ಯದಿಂದ ಮಾತು ಕೂಡಿರಬೇಕಾದುದು ಅವಶ್ಯವಾಗಿದೆ.

**ಒಂದಾಗಲಿ ನಡೆ–ನುಡಿ**

ದಿನ ಬೆಳಗಾದರೆ ಸಾಕು ಮತ್ತೊಬ್ಬರ ತಪ್ಪನ್ನು ಎತ್ತಿ ಆಡುವವರೇ ಬಹಳ ಜನ. ತಮ್ಮ ತಪ್ಪನ್ನು ಮರೆಮಾಚಿ ಮತ್ತೊಬ್ಬರ ತಪ್ಪನ್ನು ಹುಡುಕಿ ಅಣಕಿಸುವವರೇ ಎಲ್ಲೆಡೆ ಕಾಣುತ್ತಾರೆ. ಮೊದಲು ತನ್ನನ್ನು ತಾನು ಅರಿಯಬೇಕು, ತಿಳಿಯಬೇಕು. ಅಲ್ಲದೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಹೀಗೆ ನಡೆವಾಗ ಅವನ ನಡೆ–ನುಡಿಯಲ್ಲಿ ಸರಳತೆ, ಪ್ರಾಮಾಣಿಕತೆ ಇರಬೇಕು. ನುಡಿದಂತೆ ನಡೆವವರು ಕಡಿಮೆ ಜನ. ನುಡಿವುದು ತುಂಬ ಸುಲಭ. ಅದನ್ನು ಆಚರಣೆಗೆ ತರುವುದು ಕಠಿಣ. ಅದಕ್ಕೆ ನಡೆ–ನುಡಿ ಒಂದೇ ಆಗಿರಬೇಕು. ಮೊದಲು ತನ್ನನ್ನು ತಾನು ಸುಧಾರಣೆ ಮಾಡಿಕೊಳ್ಳುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಬಸವಣ್ಣನವರು;

***"ಲೋಕದ ಡೊಂಕ ನೀವೇಕೆ ತಿದ್ದುವಿರಿ?***
***ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.***
***ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ***
***ಕೂಡಲಸಂಗಮದೇವ"***

**(ವ.ಸಂ–1,ವ–124,ಪು–20)**

ಎಂದು ಹೇಳಿದ ಮಾತನ್ನು ಗಂಭೀರವಾಗಿ ಆಲೋಚಿಸಬೇಕು. ಈ ಮೇಲಿನ ಮಾತುಗಳಲ್ಲಿ ಇಡೀ ಲೋಕದ ಸ್ವಾಸ್ಥ್ಯವೇ ಅಡಗಿದೆ. ಲೋಕದ ಡೊಂಕನ್ನು ತಿದ್ದುವ ಮೊದಲು ತಾನು ಸಾತ್ವಿಕನಾಗಿರಬೇಕು. ಅಂದಾಗ ತನ್ನ ವ್ಯಕ್ತಿತ್ವ ವಿಕಸನದ ಜೊತೆ ಜೊತೆಗೆ ಸಮಾಜದ, ಲೋಕದ ಸುಧಾರಣೆ ತನ್ನಿಂದ ತಾನೇ ಆಗುವದೆಂಬುದು ಈ ವಚನದ ಆಶಯ.

ರಾಷ್ಟ್ರಪಿತ ಗಾಂಧೀಜಿ ಒಂದೆಡೆ ಹೀಗೆ ಹೇಳಿದ್ದಾರೆ. 'ನಿನ್ನನ್ನು ನೀನು ತಿಳಿದುಕೊಳ್ಳುವುದು, ನಿನ್ನ ಮನಸ್ಸನ್ನು ಹದಗೊಳಿಸಿಕೊಂಡಾಗ ಮಾತ್ರ' ಎಂಬುದು ಅರ್ಥಪೂರ್ಣವಾಗಿದೆ. ತನ್ನನ್ನು ತಾನು ಪರೀಕ್ಷೆಗೆ ಒಳಪಡಿಸಿಕೊಳ್ಳುವುದು ಮುಖ್ಯ.

ಇಂದು ಮತ್ತೊಬ್ಬರಿಗೆ ಉಪದೇಶ ಮಾಡುವ ಜನ ಹೆಚ್ಚು. ಬೇರೊಬ್ಬರ ಬದುಕಿನಲ್ಲಿ ಮೂಗು ತೂರಿಸಲು ಬರುತ್ತಾರೆ. ವೇದಾಂತದಂತೆ ದೊಡ್ಡ ದೊಡ್ಡ ಮಾತುಗಳ ಒಣ ಉಪದೇಶ ಹೇಳುವರು. ತಾನೇ ಸುಳ್ಳು, ಮೋಸ, ವಂಚನೆ, ಕ್ರೌರ್ಯದಂತಹ ಹೀನ ಕೃತ್ಯಗಳಲ್ಲಿ ತೊಡಗಿ ಅನ್ಯಾಯ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವವರೇ ಎಲ್ಲೆಡೆ ಕಾಣಸಿಗುವರು. ಇಂಥವರಿಂದ ಸಮಾಜಕ್ಕೆ ಹಾನಿಯೇ ಅಧಿಕ. ಇವರ ನಡುವೆ ನಿಸ್ಪೃಹ, ಪ್ರಾಮಾಣಿಕ, ನೀತಿ, ನಿಷ್ಠೆ, ಕರ್ತವ್ಯನಿರತ ಸರಳ, ಸಂಭಾವಿತ ವ್ಯಕ್ತಿಯು ನಲುಗಿ ಹೋಗುತ್ತಾನೆ. ಸತ್ಯದಿಂದ ನಡೆವವರನ್ನು ಪರಮಾತ್ಮ ಮೆಚ್ಚುವನು. ನುಡಿದಂತೆ ನಡೆವವರು ಮಹಾತ್ಮರೆನಿಸಿಕೊಳ್ಳುತ್ತಾರೆ.

**ಸದಾಚಾರ**

ಕಾಯಕ ದಾಸೋಹ ತತ್ವಗಳು ವೀರಶೈವದ ಜೀವಾಳ. ಇವುಗಳ ಆಚರಣೆ ತಕ್ಕಮಟ್ಟಿಗೆ ವೀರಶೈವರಲ್ಲಿ ಉಳಿದು ಬಂದ ಕಾರಣ ಅದು ಇನ್ನೂ ಜೀವಂತ ಸಮಾಜವಾಗಿ ಪರಿಣಮಿಸಿದೆ. ಕೇವಲ ಹೊಟ್ಟೆಪಾಡಿಗಾಗಿ ಮಾಡುವದು ವೃತ್ತಿಯಾದರೆ ಅದನ್ನು ಪೂಜೆಯೆಂದು ಮಾಡುವದು ಕಾಯಕ. ಕಾಯಕದಿಂದ ಗಳಿಸಿದ ಧನವನ್ನು ಗುರುಲಿಂಗಜಂಗಮಕ್ಕೆ ಅರ್ಪಿಸಿ ಪ್ರಸಾದ ಕಾಯನಾಗುವದು ಸದಾಚಾರ, ಜಂಗಮ ಲಿಂಗದ ಮುಖ. ಜಂಗಮಕ್ಕೆ ದಾಸೋಹಗೈದರೆ ಲಿಂಗಕ್ಕೆ ಅರ್ಪಿಸಿದಂತೆ. ಜಂಗಮಕ್ಕೆ ಅರ್ಪಿಸಿದುದನ್ನು ಪ್ರಸಾದ ರೂಪದಲ್ಲಿ ಸೇವಿಸಿದಾಗ ಕಾಯ ಪ್ರಸಾದ

ಕಾಯವಾಗುತ್ತದೆ. ವಿಶಾಲ ಅರ್ಥದಲ್ಲಿ ಸಮಾಜ, ರಾಷ್ಟ್ರ ಹಾಗೂ ಸಕಲಜೀವಾತ್ಮರು ಜಂಗಮವೇ. ಇವುಗಳ ಸೇವೆಯೇ ಜಂಗಮ ದಾಸೋಹ. ಈ ಅರ್ಥದಲ್ಲಿ ಜಂಗಮ ದಾಸೋಹಗೈಯಬೇಕು.

**ಲಿಂಗಾಚಾರ ಶಿವಾಚಾರ** ತತ್ವಗಳು ಸಮಾನತೆಯನ್ನು ಪ್ರತಿಪಾದಿಸಿದಂತೆ ಕಾಯಕಾಧಾರಿತ ಸದಾಚಾರ ತತ್ವವು ಸಮಾನತೆಯನ್ನು ಪ್ರತಿಪಾದಿಸುತ್ತದೆ. ಕಾಯಕದಲ್ಲಿ ಮೇಲುಕೀಳುಗಳಿಲ್ಲ. ಇವುಗಳ ಆಧಾರದ ಮೇಲೆ ಕುಲಜಾತಿಯನ್ನೆಣಿಸುವುದು ಸರಿಯಲ್ಲ. "ದೇವ ಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ, ನಿಮ್ಮ ಪುರಾತರಾಣೆ ಎಂದು ಬಸವಣ್ಣನವರು ಸಾರಿ ಶ್ರಮಗೌರವವನ್ನು ಎತ್ತಿ ಹಿಡಿದಿದ್ದಾರೆ.

ಎಲ್ಲರೂ ಕಾಯಕವನ್ನು ಪ್ರಾಮಾಣಿಕತೆಯಿಂದ ಸತ್ಯ ಶುದ್ಧವಾಗಿ ಮಾಡಬೇಕು. ವಂಚನೆಯಿಲ್ಲದೆ ಮಾಡಬೇಕು. ಅವರಲ್ಲಿ ತಲ್ಲೀನರಾಗಿ ತಮ್ಮನ್ನು ಮರೆಯಬೇಕು. ಆಗ ಅದೇ ಗುರು ಲಿಂಗ ಜಂಗಮಾರಾಧನೆಯಾಗುತ್ತದೆ. ಆಯ್ದಕ್ಕಿ ಮಾರಯ್ಯನವರ ಮಾತಿನಲ್ಲಿ ಹೇಳುವದಾದರೆ:

***"ಕಾಯಕದಲ್ಲಿ ನಿರತನಾದಡೆ,***
***ಗುರುದರ್ಶನವಾದಡೂ ಮರೆಯಬೇಕು.***
***ಲಿಂಗಪೂಜೆಯಾದಡೂ ಮರೆಯಬೇಕು,***
***ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.***
***ಕಾಯಕವೇ ಕೈಲಾಸವಾದ ಕಾರಣ.***
***ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು."***

**(ವ.ಸಂ–1,ವ–1165,ಪು–1068)**

ಹೀಗಾದರೆ ಕಾಯಕವೇ ಕೈಲಾಸವಾಗುತ್ತದೆ. ಇಂಥ ಸತ್ಯಶುದ್ಧಕಾಯಕದಿಂದ ಗಳಿಸಿದ ಹಣ ಗುರು–ಲಿಂಗ–ಜಂಗಮ–ದಾಸೋಹಕ್ಕೆ ಸಲ್ಲುತ್ತದೆ. ವಾಮಮಾರ್ಗದಿಂದ ಗಳಿಸಿದ ಹಣ ಪಾಪಿಯ ಧನ, ಅದು ಪ್ರಾಯಶ್ಚಿತ್ತಕ್ಕೆ ಸಲ್ಲುಲು ಯೋಗ್ಯವೇ ಹೊರತು ದಾಸೋಹಕ್ಕಲ್ಲ. ಯಾವ ಕಾಯಕವಾದರೇನು? ಅದರಲ್ಲಿ ತನುಮನವನ್ನು ಬಳಲಿಸಬೇಕು. ಆಗ ಅದು ಸತ್ಯ ಶುದ್ಧ ಕಾಯಕವಾಗುತ್ತದೆ. ಇದರಿಂದ ಬಂದ ಧನ ದಾಸೋಹಕ್ಕೆ ಯೋಗ್ಯವಾಗುತ್ತದೆ. "ಕೃಷಿ ಕೃತ್ಯ ಕಾಯದಿಂದಾದರೇನು? ತನುಮನವ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯ, ಎನಗೆ ಅದೆಂತೆನೆ: ಆತನ ತನು ಶುದ್ಧ! ಆತನ ಮನ ಶುದ್ಧ! ಆತನ ನಡೆ ಶುದ್ಧ ನುಡೆಯೆಲ್ಲವು ಪಾವನ! ಆತಂಗೆ ಉಪದೇಶ ಮಾಡಿದಾತನೆ ಪರಮ ಸದ್ಗುರು! ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು, ಲಿಂಗಾರ್ಚನೆ ಮಾಡುವ ಜಂಗಮವೇ ಜಗತ್ಪಾವನ, ಇಂತಪ್ಪವರನಾನು ನೆರೆನಂಬಿ ನಮೋ ನಮೋ ಎಂಬೆನಯ್ಯ ಕೂಡಲ ಸಂಗಮದೇವ."

ಹೀಗೆ ಯಾವ ಕಾಯಕವಾದರೇನು? ಅದರಿಂದ ಬಂದ ಹಣವನ್ನು ದಾಸೋಹಗೈದಾಗ ಅಂದರೆ ಸಮಾಜಕ್ಕೆ ವಿನಿಯೋಗಿಸಿದಾಗ ಸಮಾಜದ ಆರ್ಥಿಕ ಸ್ಥಿತಿ ಭದ್ರವಾಗಿ ಆಧ್ಯಾತ್ಮ ತಳಹದಿಯ ಮೇಲೆ ಆರ್ಥಿಕ ಸಮಾನತೆ ಏರ್ಪಡುತ್ತದೆ. ಒಂದು ರೀತಿಯಲ್ಲಿ ಇಂದು ಆಧ್ಯಾತ್ಮಿಕ ತಳಹದಿಯ ಮೇಲೆ ನೆಲೆಗೊಳಿಸಲಾದ ಸಮಾಜವಾದ ಆಧ್ಯಾತ್ಮಿಕದ ಹಿನ್ನೆಲೆಯಿಲ್ಲದೆ ಕೇವಲ ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸಿದ ಮಾರ್ಕ್ಸವಾದ ರಷ್ಯಾದಲ್ಲಿ ವಿಫಲಗೊಂಡಿತು. ಶರಣರು ಬೋಧಿಸಿದ ಕಾಯಕ ದಾಸೋಹ ತತ್ವಾಧಾರಿತ ಸಮಾಜವಾದ ಇಂದೂ ಜೀವಂತವಾಗಿದೆ.

ಶರಣರ ವಿಚಾರಗಳನ್ನು ನಾವು ಅಕ್ಷರಶಃ ಅರ್ಥಮಾಡದೆ ತಾತ್ವಿಕವಾಗಿ ಅರ್ಥ ಮಾಡಿಕೊಳ್ಳಬೇಕು. ಇಂದು ಈ ತತ್ವಗಳನ್ನು ನಮ್ಮ ಅವಶ್ಯಕತೆಗಳಿಗೆ ಬೇಕಾದಷ್ಟು ಉಳಿಸಿಕೊಂಡು ಮಿಕ್ಕಿದ್ದನ್ನು ಜಂಗಮ ದಾಸೋಹಕ್ಕೆ ಅರ್ಪಿಸುವದರ ಮೂಲಕ ಆಚರಣೆಯಲ್ಲಿ ತರಬಹುದಾಗಿದೆ. ಆದರೆ ಇದನ್ನು ಪಾಲಿಸದೆ ನಮ್ಮಲ್ಲಿ ಅನೇಕರು ಸದಾಚಾರ

ನೀತಿಯಿಂದ ವಿಮುಖರಾಗುತ್ತಿರುವದು ವಿಷಾದನೀಯವೆಂದೇ ಹೇಳಬೇಕು.

ಹೀಗೆ ವಚನಕಾರರು ನುಡಿದ ಮುತ್ತಿನಂಥ ಮಾತುಗಳಲ್ಲಿ ಒಂದಲ್ಲ, ಎರಡಲ್ಲ, ಸಿಗುವ ವಚನಗಳೆಲ್ಲ ಒಂದಲ್ಲ ಒಂದು ರೀತಿ 'ಸಾಮಾಜಿಕ ನೀತಿಗಳ ಕಣಜವೇ' ಆಗಿದೆ ಎಂದರೆ ಅತಿಶಯೋಕ್ತಿಯಲ್ಲ. ಸತ್ಯ, ದಯೆ, ಪರಸ್ತ್ರೀ ಬಗ್ಗೆ, ಮಾತಿನ ಬಗ್ಗೆ, ಸದಾಚಾರ, ಆಸೆ ಹೇಳುತ್ತಾ ಹೋದರೆ ಒಂದು ದೊಡ್ಡ ಹೊತ್ತಿಗೆಯೇ ಆದೀತು.

ಒಟ್ಟಾರೆ ವಚನಕಾರರು ಸೃಷ್ಟಿಸಿದ ಈ ಸಾಹಿತ್ಯ ಯಾವ ಮಗ್ಗುಲಿನಿಂದ ವೀಕ್ಷಿಸಿದರೂ ಸಾಮಾಜಿಕ ನಡಾವಳಿಯನ್ನು ತಿದ್ದುವ ವ್ಯವಸ್ಥೆಯನ್ನೂ, ಸಮಾನತೆಯನ್ನು, ಮಾನವೀಯತೆಯನ್ನು ಬೆಳೆಸುವ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ಎಂಬ ಹಾಗೆ ಮಾಡುವ ಒಂದು ಕೋಶವೇ ಆಗಿದೆ. ಇಲ್ಲಿ ಬರೀ ಸಮಾಜವನ್ನು ಚುಚ್ಚಿ ಹೇಳದೆ, ತಮ್ಮನ್ನು ತಾವೇ ತಿದ್ದಿಕೊಳ್ಳಲು ಪ್ರಯತ್ನಿಸಿರುವುದೂ ನಿಜಕ್ಕೂ ಆಶ್ಚರ್ಯ, ಇದೇ ನಿಜವಾದ ಕಲಿಸುವಿಕೆ ಮತ್ತು ಕಲಿಯುವಿಕೆ.

**ಆಧಾರ ಗ್ರಂಥಗಳು :**


- ಕಲಬುರ್ಗಿ, ಎಂ.ಎಂ. (ಪ್ರ.ಸಂ.). (2016). *ಬಸವಯುಗದ ವಚನ ಮಹಾಸಂಪುಟ-1.* ಕನ್ನಡ ಪುಸ್ತಕ ಪ್ರಾಧಿಕಾರ.
- ನಾಗಭೂಷಣ, ಸಿ. (2000). *ಶರಣ ಸಾಹಿತ್ಯ ಸಂಸ್ಕೃತಿ ಕೆಲವು ಅಧ್ಯಯನಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ಶ್ರೀನಿವಾಸಮೂರ್ತಿ, ಎಂ.ಆರ್. (1944). *ವಚನಧರ್ಮಸಾರ.*